


## ನೀರಿನ ಮರು ಬಳಕೆ / ಮಳೆ ನೀರು ಸಂಗ್ರಹ

ಮಳೆನೀರಿನ ಮರು ಬಳಕೆಯನ್ನು ಸರ್ಕಾರ ಕಡ್ಡಾಯವಾಗಿಸಿದೆ. ಆದರ ಹೊರತಾಗಿಯೂ ನೀರಿನ ಮರುಬಳಕೆ ಪ್ರತಿಯೊಬ್ಬನ ಸಾಮಾಜಿಕ ಜವಾಬ್ದಾರಿಯೂ ಹೌದು. ನೀವು ಕಟ್ಟುವ ಮನೆ ಮಳೆ ನೀರಿನ ಮರುಬಳಕೆಗೆ ಇಂಬುಗೊಡುವಂತಿರಲಿ. ಇದನ್ನು ಎರಡು ರೀತಿಯಲ್ಲಿ ಮಾಡಬಹುದು. ಮನೆಯ ಛಾವಣಿಯ ಮೇಲೆ ಬಿದ್ದ ಮಳೆಯ ನೀರು ಪೋಲಾಗಿ ಹೋಗದಂತೆ ಅದನ್ನು ಫಿಲ್ಟರ್ ಮಾಡಿ ನಿಮ್ಮ ನೀರಿನ ಟ್ಯಾಂಕಿಗೆ ಹೋಗುವಂತೆ ಮಾಡುವುದು. ಇದಕ್ಕೆ ಬೇಕಾದ ಸಲಕರಣೆಗಳು ಮಾರುಕಟ್ಟೆಯಲ್ಲಿ ಸುಲಭದಲ್ಲಿ ಲಭ್ಯವಿವೆ. ಹಾಗೂ ಇದಕ್ಕೆ ಹೆಚ್ಚಿನ ತಂತ್ರಜ್ಞಾನ ಬೇಕಿಲ್ಲ; ಗಣನೀಯ ಖರ್ಚಿನ ಬಾಬ್ತೂ ಅಲ್ಲ. ಇನ್ನೊಂದು ವಿಧಾನವೆಂದರೆ, 'ಇಂಗುಗುಂಡಿ'ಯ ನಿರ್ಮಾಣ. ಮನೆಯ ಮೇಲ್ಛಾವಣಿಯೂ ಸೇರಿದಂತೆ ಸುತ್ತಮುತ್ತಲೂ ನೆಲದ ಮೇಲೆ ಬಿದ್ದ ಮಳೆಯ ನೀರು ರಸ್ತೆಗೆ, ಚರಂಡಿಗೆ ಹರಿದು ಹೋಗಲು ಬಿಡದೆ ನಿಮ್ಮ ನೆಲದಲ್ಲೇ ಇಂಗುವಂತೆ ಮಾಡುವುದು. ಇದನ್ನು ನಿಮ್ಮ ಮನೆಯ ಆವಾರದಲ್ಲೇ ರಚಿಸಿಕೊಳ್ಳಿ. ಇದಕ್ಕೆ ಹೆಚ್ಚಿನ ಸ್ಥಳ ಹಾಗೂ ವೆಚ್ಚ ವ್ಯಯವಾಗದು. ಇದರಿಂದ ಅಂತರ್ಜಲ ಮಟ್ಟ ಹೆಚ್ಚುತ್ತದೆ. ಮನೆಯಲ್ಲಿ ಕೊಳವೆಬಾವಿ ಇದ್ದರೆ ಅದರ ಸಮೀಪವೇ ಇಂಗುಗುಂಡಿ ನಿರ್ಮಿಸುವುದರಿಂದ ಕೊಳವೆ ಬಾವಿಯ ನೀರಿನ ಒರತೆ ಗಣನೀಯವಾಗಿ ಹೆಚ್ಚುವುದರಲ್ಲಿ ಸಂಶಯವಿಲ್ಲ.

ನಿವೇಶನದ ಆಳತೆ ಹೆಚ್ಚಿದ್ದಷ್ಟೂ ಮಳೆ ನೀರಿನ ಮರುಬಳಕೆಯನ್ನು ಹೆಚ್ಚು ಪರಿಣಾಮಕಾರಿಯಾಗಿ ಮಾಡಬಹುದು. ಮನೆಯ ಆವಾರದಲ್ಲಿ ಹೆಚ್ಚಿನ ಇಂಗುಗುಂಡಿ ನಿರ್ಮಿಸಿ ಬಾವಿಯಲ್ಲಿ ಬೇಸಿಗೆಯಲ್ಲೂ ನೀರಿರುವಂತೆ ಮಾಡಬಹುದು. ತೋಟಕ್ಕೂ ಮಳೆಯ ನೀರನ್ನೇ ಮರುಬಳಕೆ ಮಾಡಬಹುದಾದ ಹಲವು ಸುಲಭದ ವಿಧಾನಗಳಿವೆ. ಪರಿಣತರಲ್ಲಿ ಈ ಕುರಿತು ವಿಚಾರಿಸಿ ಅದನ್ನು ಅಳವಡಿಸಿಕೊಳ್ಳುವುದು ಯೋಗ್ಯ.

ಪ್ರಕಾರಗಳು ಹೆಚ್ಚಾಗಿ ಚಾಲ್ತಿಯಲ್ಲಿ ಸಿಗುತ್ತವೆ:

1. ಲೇಬರ್ ಕಾಂಟ್ರಾಕ್ಟ್: ಇದರಲ್ಲಿ ಮನೆ ಕಟ್ಟುವ ಎಲ್ಲ ಸಾಮಗ್ರಿಗಳನ್ನೂ ಮಾಲೀಕರಾದ ನೀವೇ ನೇರವಾಗಿ ಖರೀದಿಸಿ ಪೂರೈಸಬೇಕಾಗುತ್ತದೆ.
2. ಮೆಟೀರಿಯಲ್ ಕಾಂಟ್ರಾಕ್ಟ್: ಅಗತ್ಯ ಸಾಮಾನುಗಳೂ, ಕೆಲಸ ಮಾಡುವ ಕೂಲಿಗಳೂ ಎಲ್ಲವನ್ನೂ ಸೇರಿಸಿ ಗುತ್ತಿಗೆ ನೀಡುವುದು.
3. ಡಿಸೈನ್ & ಬಿಲ್ಡ್ / ಟರ್ನ್‌ಕೀ ಕಾಂಟ್ರಾಕ್ಟ್: ಇಲ್ಲಿ ಮನೆಯ ವಿನ್ಯಾಸವನ್ನು ಗುತ್ತಿಗೆದಾರನೇ ಮಾಡಿ ಅದರ ಪ್ರಕಾರ ಮನೆಯನ್ನೂ ಕಟ್ಟಿಕೊಡುತ್ತಾನೆ. ಈ ಮೂರೂ ಕ್ರಮಕ್ಕೂ ಅದರದೇ ಆದ ಧನಾತ್ಮಕ ಹಾಗೂ ಋಣಾತ್ಮಕ ಅಂಶಗಳಿವೆ.

ನೀವೇ ನೇರವಾಗಿ ಸಾಮಾನುಗಳನ್ನು ಪೂರೈಸಲು ಸಾಕಷ್ಟು ಸಮಯ ಹಾಗೂ ವ್ಯವಧಾನ ಬೇಕು. ವಸ್ತುವಿನ ಬೆಲೆಯ ಮಾಹಿತಿ, ಅದನ್ನು ಸರಬರಾಜು ಮಾಡುವ ಡೀಲರುಗಳ ಮಾಹಿತಿ, ಮೆಟೀರಿಯಲ್ ಅನ್ನು ಸೈಟಿಗೆ ಸಾಗಿಸುವ ಬಗ್ಗೆ ಸಾಕಷ್ಟು ತಿಳಿವಳಿಕೆಯೂ ಇರಬೇಕು. ಕೂಲಿ ಕಾರ್ಮಿಕರ ಹತ್ತಿರ ನೇರವಾಗಿ ಕೆಲಸ ಮಾಡಿಸುವ ಪರಿಣಿತಿಯೂ ಅಗತ್ಯ. ಇಂದು ಕಾರ್ಮಿಕರು ಅಷ್ಟು ಸುಲಭದಲ್ಲಿ ಲಭ್ಯರೂ ಅಲ್ಲ ಹಾಗೂ ನಮ್ಮ ಅಗತ್ಯಕ್ಕೆ ತಕ್ಕಂತೆ ಒದಗಿಬರುವುದಿಲ್ಲ ಎನ್ನುವ ಸಮಸ್ಯೆ ಎಲ್ಲೆಡೆ ಕೇಳಿ ಬರುವಂಥದ್ದು. ಮನೆ ಕಟ್ಟಲು ಗುತ್ತಿಗೆ ನೀಡಿದರೆ ಈ ಎಲ್ಲ ಸಮಸ್ಯೆಗಳು ಇರುವುದಿಲ್ಲ. ಅದೆಲ್ಲವನ್ನು ನೋಡಿಕೊಳ್ಳುವುದು ಗುತ್ತಿಗೆದಾರನ (ಕಾಂಟ್ರಾಕ್ಟರ್) ಜವಾಬ್ದಾರಿ. ಆದರೆ ಇಲ್ಲಿ ಗುತ್ತಿಗೆದಾರ ತನ್ನ ಲಾಭಾಂಶವನ್ನೂ ಸೇರಿಸಿಕೊಂಡು ಮನೆ ಕಟ್ಟಲು ದರ ನಿಗದಿ ಪಡಿಸುತ್ತಾನೆ. ಹೀಗಾಗಿ ಮನೆಯ ಬಜೆಟ್ಟು ಹೆಚ್ಚಾಗುತ್ತದೆ ಎಂಬುದು ಸಾಮಾನ್ಯ ಅಭಿಪ್ರಾಯ. ಹಾಗೂ ಗುತ್ತಿಗೆ ನೀಡುವುದರಿಂದ ಕಾಂಟ್ರಾಕ್ಟರ್ ಬಳಸುವ ಸಾಮಗ್ರಿಗಳ ಮೇಲೆ ಮಾಲೀಕರ ಹಿಡಿತ ಇರುವುದಿಲ್ಲ ಎನ್ನುವ ಅಭಿಪ್ರಾಯವೂ ಕೆಲವರಲ್ಲಿದೆ.

ನಿರ್ಮಾಣದ ಗುತ್ತಿಗೆ ನೀಡುವುದಕ್ಕೂ ಮುಂಚಿತವಾಗಿ ಎಲ್ಲ ವಿಷಯಗಳ ಬಗ್ಗೆ ಕಾಂಟ್ರಾಕ್ಟರ್ ಬಳಿ ಕೂಲಂಕಷವಾಗಿ ಮಾತನಾಡಿ (ಬಳಸುವ ಸಾಮಗ್ರಿಯಿಂದ ಹಿಡಿದು, ಮಾಡತಕ್ಕ ಕೆಲಸದ ವ್ಯಾಪ್ತಿ – ಸ್ಕೋಪ್ ಆಫ್ ವರ್ಕ್‌ನ್ನೂ ಒಳಗೊಂಡಂತೆ) ಮೊದಲೇ ಎಲ್ಲ ಗೊಂದಲಗಳನ್ನೂ ಪರಿಹರಿಸಿಕೊಂಡು, ಅದನ್ನು ದಾಖಲು ಮಾಡಿ



ಶ್ರೀ ರಾಘವೇಂದ್ರ ಜ್ಯೋತಿಷ್ಯಾಲಯ
ಉಚಿತ ಭವಿಷ್ಯ ಶಾಶ್ವತ ಪರಿಹಾರ
ಫೋನಿನ ಮೂಲಕ ಭವಿಷ್ಯ ತಿಳಿಸುತ್ತಾರೆ
ನಿಮ್ಮ ಸಮಸ್ಯೆಗಳಾದ ಉದ್ಯೋಗ, ವಿವಾಹ, ಸಂತಾನ, ಸ್ತ್ರೀಪುರುಷ ಪ್ರೇಮವಿಚಾರ, ವಶೀಕರಣ, ಅತ್ತೆ–ಸೊಸೆ ಕಲಹ, ಗಂಡ–ಹೆಂಡತಿ ಕಿರಿಕಿರಿ, ಶತ್ರುಕಾಟ, ಸಾಲಬಾದೆ, ಮಾಟ–ಮಂತ್ರ, ಇನ್ನೂ ಅನೇಕ ಸಮಸ್ಯೆಗಳಿಗೆ ಶ್ರೀರಾಘವೇಂದ್ರ ಸ್ವಾಮಿ ಪೂಜಾಫಲದಿಂದ
5 ದಿನಗಳಲ್ಲಿ ಶಾಶ್ವತ ಪರಿಹಾರ.
ಸ್ತ್ರೀ–ಪುರುಷ ವಶೀಕರಣ, ಇಷ್ಟಪಟ್ಟವರು ನಿಮ್ಮಂತೆ ಆಗಲು
ಕೇರಳ ಹಾಗೂ ಕೊಳ್ಳೆಗಾಲ ಪೂಜಾ ಶಕ್ತಿಯಿಂದ
5 ದಿನಗಳಲ್ಲಿ ಶಾಶ್ವತ ಪರಿಹಾರ.
ನೀವು ಹಲವಾರು
ಜ್ಯೋತಿಷ್ಯರಲ್ಲಿ ಕೇಳಿ ಪರಿಹಾರ
ಸಿಗದೆ ನೊಂದಿದ್ದರೆ
ಪರಿಹಾರಕ್ಕಾಗಿ ಸಂಪರ್ಕಿಸಿ.
ಪಂಡಿತ್.
ಸುರೇಶ್ ಭಟ್ ಗುರೂಜಿ
9900304751